ಸಾಕ್ಷಿಯನ್ನು ದಿ: 08.04.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-2

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-**

1. ವಾದಿಯ ಆಸ್ತಿ ಸರ್ವೆ ನಂ.28/1 ಮತ್ತು 2. ವಾದಿಯ ಆಸ್ತಿಯ ಉತ್ತರ ದಿಕ್ಕಿಗೆ ಸರ್ವೆ ನಂ.30 ಬರುತ್ತದೆ. ವಾದಿಯ ಆಸ್ತಿಯ ಉತ್ತರ ದಿಕ್ಕಿಗೆ ನನ್ನ ಆಸ್ತಿ ಇರುತ್ತದೆ. ನನ್ನ ಆಸ್ತಿಯ ಉತ್ತರ ದಿಕ್ಕಿಗೆ ನಾಗರಾಜುರವರ ಆಸ್ತಿಯಿರುತ್ತದೆ. ಸಾಕ್ಷಿಗೆ ಕೆಂಭೂತಕೆರೆ ಗ್ರಾಮದ ಗ್ರಾಮ ನಕಾಶೆ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ.3 ಎಂದು ಗುರುತಿಸಲಾಯಿತು. ನಿಡಿ.3 ರ ಪ್ರಕಾರ ಸರ್ವೆ ನಂ.31 ರ ಉತ್ತರ ದಿಕ್ಕಿಗೆ ಬಂಡಿದಾರಿ ಇದೆಯೆಂದರೆ ಸರಿ. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ.4 ಎಂದು ಗುರುತಿಸಲಾಯಿತು. ನಿಡಿ.4 ರಲ್ಲಿ ಹಾಕಿರುವ ತಂತಿ ಬೇಲಿ ಆಸ್ತಿ ನಾಗರಾಜುರವರ ಆಸ್ತಿ ಎಂದರೆ ಸರಿ. ನಿಡಿ.4 ರಲ್ಲಿ ಕಾಣಿಸುವ ರಸ್ತೆಯು ನಾಗರಾಜುರವರ ಜಮೀನಿನ ಪೂರ್ವದಿಕ್ಕಿಗೆ ಬರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಮುಖಾಂತರ ನಾನು ಮತ್ತು ವಾದಿ ನಮ್ಮ ಜಮೀನಿಗೆ ಓಡಾಡುತ್ತೇವೆಂದರೆ ಸಾಕ್ಷಿಯು ಸರ್ವೆ ನಂ.30 ಮತ್ತು 31 ಕ್ಕೆ ಮಾತ್ರ ಬಿಟ್ಟಿರುತ್ತಾರೆಂದು ನುಡಿಯುತ್ತಾರೆ. ನಿಡಿ.4 ರಲ್ಲಿ ಕಾಣಿಸುವ ಹಿಪ್ಪುನೇರಳೆ ತೋಟ ನನ್ನದು ಎಂದರೆ ಸರಿ. ನಿಡಿ.4 ರಲ್ಲಿರುವ ಬಂಡಿ ದಾರಿಯು ನನ್ನ ಹಿಪ್ಪುನೇರಳೆ ತೋಟದವರೆಗೂ ಇರುತ್ತದೆ ಎಂದರೆ ಸಾಕ್ಷಿಯು ಇರುತ್ತದೆ ಅದನ್ನು ನಾಗರಾಜು ಬಿಟ್ಟಿರುತ್ತಾರೆಂದು ನುಡಿಯುತ್ತಾರೆ. ಸಾಕ್ಷಿಗೆ ಇನ್ನೊಂದು ಫೋಟೋ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ.5 ಎಂದು ಗುರುತಿಸಲಾಯಿತು. ನಿಡಿ.5 ರಲ್ಲಿ ಕಾಣಿಸುವ ರಸ್ತೆಯ ದಕ್ಷಿಣಕ್ಕೆ ನನ್ನ ಜಮೀನು ಇರುತ್ತದೆ ಎಂದರೆ ಸರಿ. ನಾನು ನನ್ನ ಅಣ್ಣನಾದ ವಾದಿಗೆ ರಸ್ತೆ ಕೊಡಬೇಕಾಗುತ್ತದೆಂದು ಪ್ರತಿವಾದಿ ವಿರುದ್ದ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನಾಗಲೀ ನನ್ನ ಅಣ್ಣ ವಾದಿಯಾಗಲೀ ನಾಗರಾಜುರವರ ಜಮೀನಿನ ಪೂರ್ವ ದಿಕ್ಕಿನಲ್ಲಿರುವ ರಸ್ತೆಯಲ್ಲಿ ಯಾವಾಗಲೂ ಓಡಾಡುತ್ತೇವೆಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ